ಮಂಟವ್ವಗೋ ಇಲ್ಲ ಕಟ್ಟಿ ತುದಿಗೆ ಅರಬಿ ಒಕ್ಕೋಂತ, ಕಾಳು ಕಡೀ ಹಸನ್ ಮಾಡ್ಕೊತ ಕುಂತ ಪಾರವ್ವಗೋ ಒದರೋರು,

"ಎಲಿ ಇದ್ರ ಕೊಟ್ಟ ಕಳಸವಾ ಸ್ವಲ್ಪ ಖೋಡಿ ನಮ್ ಮನ್ಯಾಗ ಮುಗದ ಹೋಗ್ಯಾವ" ಪಾರವ್ವ ಮಾತಾಡದನ ಮಾಡೂ ಕೆಲ್ಸ ಬಿಟ್ಟು ಎದ್ದ ಹೋಗಿ ಒಳಗಿಂದ ಎಲಿ ಅಡಕಿ ಎತಗೊಂಡ್ ಹೋಗಿ ಕೊಡ್ತಿದ್ಲು.

ಪಾಪ ಒಳ್ಳೆ ಮನಶ್ಯಾ. ತಾವು ತಮ್ಮ ಮನೀ ಅಂತ ಯಾ ಉಪದ್ರಾ ಮಾಡದ ಇರೂ ಮಂದಿ. ತಮ್ಮ ಓಣ್ಯಾಗ ಅವರದೊಂದ ಹಾರೂರ ಮನೀ.

ಇವರ ದೊಡ್ಡ ನಾಕು ಕಂಬದ್ ಮನೀ ಎದುರುಗಡೆನ ಹಾರೂರ ಶ್ರೀಪಾದಾಚಾರಿ ಮನೀ. ಅವ್ರ ಹೆಂತಿ ಪದ್ಮಾನ್ ಹಡಿಯೂ ಮುಂದ ತೀರಿಹೋಗಿದ್ಲು. ಈಗ ಮನ್ಯಾಗ ಮಗಳು ಮತ್ತ ಅವರ ಅವ್ವ ಪುಟ್ಟಕ್ಕಜ್ಜಿ ಇಷ್ಟ ಇದ್ದೋರು. ಪುಟ್ಟಕ್ಕ ಹೆಚ್ಚಾಗಿ ಮಡಿ ಮಡಿ ಅಂತನ ಸಾಯ್ಕೋಂತ ಪಾಪ ಆ ಹುಡುಗಿಗೂ ತೆಲಿ ಬಾಚಾಕ ಆಗ್ತಿದ್ದಿಲ್ಲ. ಯೋಳನೆತ್ತ ಓದಾಕತ್ತಿದ್ದ ಆ ಪದ್ದೀಗೂ ಜಡಿ ಹಾಕ್ಕೋಳಾಕ ಬರ್ತಿದ್ದಿಲ್ಲ. ಆಗೆಲ್ಲ ಪಾರಮ್ಮನ ಹಂತೇಲೆ ಓಡಿ ಬರ್ತಿದ್ಲು. ಸ್ವಲಪ ಜಡೀ ಹಾಕ್ರೀ ಸಾಲಿಗ್ ಹೋಗ್ಬೇಕು..." ಅನ್ನಾಕಿ. ಇಲ್ಲಾ ಅಲ್ಲೇ ಬಾಜೂಕ ಗಿರಣ್ಯಾಗ ಕುಂತಿದ್ದ ಮಂಟವ್ವಗ ಜೇಂವಾ ತಿಂತಿದ್ಲು.

ಇಷ್ಟ ದಿನಾ ಹೆಣ್ಣಿನ ದೇಹಾನ ಮರೆತಿದ್ದ ಆಚಾರಿ ಮೈ ಮನಸ್ಸು ಒಮ್ಮೆಗೆ ಬೆಚ್ಚಗಾಗಿ ನಡಗಾಕ ಹತ್ತಿದ್ವು. ತೆಲಿ ಕೆಟ್ಟೋರಂಗ ಪಾರವ್ವನ ಮೈಯೆಲ್ಲಾ ಹುಚ್ಚರಂಗ ಸವರಾಕ ಹತ್ತಿದ್ರು. ಲೊಚ ಲೊಚಾ ಮುದ್ದುಗರ್ಯಾಕ ಹತ್ತಿದ್ರು. ಇನ್ನ ಸ್ವಲ್ಪ ಹೊತ್ ಇದ್ದಿದ್ರ ಅವತ್ತ ಏನ್ ಅನಾಹುತಾ ಆಗ್ತಿತ್ತೋ ಏನೋ...

ಪದ್ದಿ ಮೈನೆರೆದು ದೊಡ್ಡಾಕಿಯಾಗೂವರ್ಗೂ ಈ ಮನೀ ಆ ಮನಿ ಅಂತ ಓಡಾಡ್ಕೋತಿದ್ಲು. ಗೋಮಾ ಹಚ್ಚಾಕ ಸೆಗಣಿ ಬೇಕಂತ ಇಲ್ಲ ಹೊಲದ ಎರೆಮಣ್ಣು ಬೇಕಂತ ಬರೋವಾಕಿ. ಹಸಿ ಶೇಂಗಾ ಬೇಕss ಹಸೀ ಮೆಣಸಿನಕಾಯಿ ಅದಾವೇನರಿss ಅಂತ ಓಡಾಡ್ತಿದ್ಲು. ತಮ್ಮ ಹೊಲದಿಂದ ಏನ ಬಂದ್ರೂ ಪಾರವ್ವ ಒಂದೆರಡು ಬೊಗಸಿ ಎತ್ಗೊಂಡು ಹೋಗಿ ಪುಟ್ಟಕ್ಕಗ ಕೊಟ್ ಬರ್ತಿದ್ಲು. ಅದರ ಬದ್ಲಿ ಹಾರೂರ್ ಅಜ್ಜಿ ಬೇಸನ್ ಲಡ್ಡು, ಅಳ್ಳಿಟ್ಟು, ಅವಲಕ್ಕಿ ಅಂತ ಮಾಡಿದಾಗೆಲ್ಲ ಪಾರವ್ವನ ಮಕ್ಕಳಿಗೆ ಅಂತ ಪದ್ದಿ ಕೈಯ್ಯಾಗ ಕೊಟ್ಟ ಕಳಿಸ್ತಿದ್ಲು.

ಕೆಂಪಗಿನ ಮೈಬಣ್ಣ ಎತ್ತರದ ಮೈಕಟ್ಟಿನ ಪಾರವ್ವ ಭಾಳ ಚೆಲುವಿ. ಲಗ್ನಾದ ಹೊಸದ್ರಾಗಂತೂ ಅಕೀ ಹುರುಪಿಂದ ಗಂಡನ ಜತಿ ಹೊಲಕ್ಕ ಹೊಂಟ್ರಂತೂ ಅಕೀ ರೂಪಾ ಕೇಳೋದ ಬ್ಯಾಡ. ಫಕೀರಪ್ಪನ ಜತಿ ಹೊಲಕ್ಕ ಹೋಗಿ ದುಡಿತಿದ್ಲು. ಮನ್ಯಾಗ ಅತ್ತಿ ಮೈದುನ್ರು ಅಂತ ಗಂಡ ಹೇಂತಿಗೆ ಮಕಾ ನೋಡಾಕೂ ಆಗ್ತಿದ್ದಿಲ್ಲ. ಹೊಲಕ್ಕ ಹೋದ್ರ ತಾವ ಇಬ್ಬರ ಇರಬೋದು ಅಂತ ಪಾರಮ್ಮ ಕುಣಕೋತ ಹೊಲಕ್ಕ ಹೋಗ್ತಿದ್ಲು. ಹೊಲದಾಗೂ ದುಡಿಯೂ ಆಳುಕಾಳು ಬಿಟ್ರ ಯಾರಿರ್ತಿದ್ದಿಲ್ಲ. ಪಾರಮ್ಮಗ ಗಂಡನ ಹಂತೇಲಿರೂದಂದ್ರ ಭಾಳ ಸೇರ್ತಿತ್ತು. ಅವಂಗೂ ಹೇಂತಿ ಹಂತೇಲಿದ್ರ ಸಾಕು ಅನ್ನೂ ವಯಸ್ಸು. ಕಷ್ಟಪಟ್ಟು ದುಡಿಯೂ ಮೈಗೂ ಹೇಂತಿ ಭಾಳ ಬೇಕು ಅನಿಸ್ತಿತ್ತು. ಶಿವಮ್ಮ, ಶ್ರೀಕಾಂತ ಹುಟ್ಟಿದ ಮ್ಯಾಲ ಪಾರವ್ವಗ ಹೊಲಕ್ಕ್ ಹೋಗಾಕ ಆಗ್ತಿದ್ದಿಲ್ಲ.